

# ರೀಷ್ಮಾ ಸಿನಿಗ್ರಾಫ್

'ಯುಐ', 'ಕೆಡಿ', 'ದಿ ಡೆವಿಲ್', 'ಅಣ್ಣ ಫ್ರಂ ಮೆಕ್ಸಿಕೊ'... ನಾಲ್ಕೈದು ಸಿನಿಮಾಗಳ ನಡುವೆ ಬ್ಯುಸಿಯಾಗಿರುವ ನಟಿ ರೀಷ್ಮಾ ನಾಣಯ್ಯ, ತಮ್ಮ ಸಿನಿಗ್ರಾಫ್ ಬಗ್ಗೆ ಮಾತನಾಡಿದ್ದಾರೆ. ಕಡಿಮೆ ಅವಧಿಯಲ್ಲಿಯೇ ತಮಗೆ ಸಿಗುತ್ತಿರುವ ಉತ್ತಮ ಅವಕಾಶಗಳ ಬಗ್ಗೆ ಖುಷಿ ಹಂಚಿಕೊಂಡಿದ್ದಾರೆ.

"ನನ್ನ ಫಿಲ್ಮೋಗ್ರಫಿ ಪಡೆಯುತ್ತಿರುವ ಆಕಾರವನ್ನು ನೋಡಿದರೆ ನಾನು ಅದೃಷ್ಟವಂತೆ ಅನ್ನಿಸುತ್ತದೆ. 'ಏಕ್‌ಲವ್ಯ' ಸಿನಿಮಾದಿಂದ ಈವರೆಗೂ ಬಹಳ ಸುಂದರ ಹಾಗೂ ಕ್ರಿಯಾಶೀಲ ತಂಡಗಳ ಭಾಗವಾಗಿದ್ದೇನೆ. ಪ್ರತಿ ಸಿನಿಮಾದಲ್ಲಿಯೂ ನನ್ನನ್ನು ನಾನು ಉತ್ತಮಗೊಳಿಸಿಕೊಳ್ಳಲು ಅವಕಾಶ ಸಿಗುತ್ತಿದೆ. ಇದು ನನ್ನ ಆತ್ಮವಿಶ್ವಾಸದ ಮಟ್ಟವನ್ನೂ ಹೆಚ್ಚಿಸಿದೆ' ಎಂದಿದ್ದಾರೆ.

'ಪಾತ್ರಗಳನ್ನು ಆಯ್ಕೆ ಮಾಡಲು ನಿರ್ದಿಷ್ಟ ಫಾರ್ಮುಲಾ ನನಗಿಲ್ಲ. ತಂದೆಯೊಂದಿಗೆ ಕುಳಿತು ಸ್ಕ್ರಿಪ್ಟ್ ಕೇಳುತ್ತೇನೆ. ಸ್ಕ್ರೀನ್ ಸ್ಪೇಸ್‌ಗಿಂತ ನನ್ನ ಪಾತ್ರ ಹಾಗೂ ಅದು ಬೀರುವ ಪರಿಣಾಮದ ಮೇಲೆ ನನ್ನ ಗಮನ ಇರುತ್ತದೆ. ನನ್ನ ಪಾತ್ರ ಏನು ಹಾಗೂ ಹೇಗೆ ಈ ಪಾತ್ರ ಪ್ರೇಕ್ಷಕರೊಂದಿಗೆ ಮಿಳಿತವಾಗುತ್ತದೆ ಎಂಬುದನ್ನು ವಿಶ್ಲೇಷಣೆ ಮಾಡಿಕೊಳ್ಳುತ್ತೇನೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ ನನ್ನ ಕರಿಯರ್‌ನ ಆರಂಭಿಕ ದಿನಗಳಲ್ಲಿಯೇ ಉಪೇಂದ್ರ ಹಾಗೂ ಗಣೇಶ್ ಅವರಂಥ ನಟರೊಂದಿಗೆ ಕೆಲಸ ಮಾಡಲು ಅವಕಾಶ ಸಿಕ್ಕಿದೆ. ಇದಕ್ಕೆ ನಾನು ಆಭಾರಿ" ಎಂದು ಸಂತಸ ಹಂಚಿಕೊಂಡಿದ್ದಾರೆ.

ರೀಷ್ಮಾ ನಟನೆಯ 'ಯುಐ' ಸಿನಿಮಾ ಇದೇ ಡಿಸೆಂಬರ್‌ನಲ್ಲಿ ಬಿಡುಗಡೆಯಾಗುತ್ತಿದ್ದು, 'ಕೆಡಿ', 'ದಿ ಡೆವಿಲ್' ಸಿನಿಮಾಗಳೂ ಅವರ ಕೈಯಲ್ಲಿವೆ. ಡಾಲಿ ಧನಂಜಯ್ ಜೊತೆಗೂ ತೆರೆ ಹಂಚಿಕೊಳ್ಳಲು ಅಣಿಯಾಗುತ್ತಿದ್ದಾರೆ.



# 'ಕಾಮನ್ ಮ್ಯಾನ್' ಹೀರೊ!

'ಪ್ರತಿ ಸಾಮಾನ್ಯ ಮನುಷ್ಯನೂ ಹೀರೊ; ಅವನನ್ನು ಪ್ರತಿನಿಧಿಸುವುದು ನನಗೆ ಬಹಳ ಇಷ್ಟ' ಎಂದಿದ್ದಾರೆ ನಟ ವಿನಯ್ ರಾಜಕುಮಾರ್.

ದುನಿಯಾ ವಿಜಯ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಹೊಸ ಸಿನಿಮಾದಲ್ಲಿ ತಮ್ಮ ಪಾತ್ರದ ಕುರಿತು ವಿಶ್ಲೇಷಣೆ ಮಾಡುತ್ತಾ ಮಾತನಾಡಿರುವ ವಿನಯ್, "ಪ್ರತಿಯೊಬ್ಬರೂ ಅವರವರ ಜೀವನದಲ್ಲಿ ಹೀರೊಗಳೇ. ನಮ್ಮ ಸುತ್ತ ಗಮನಿಸಿದರೆ, ಹೇಳಬೇಕಾದ ಹಲವು ಕಥೆಗಳಿರುತ್ತವೆ. ಸಾಮಾನ್ಯ ಮನುಷ್ಯನಿಗೆ, 'ನೀನೇ ಹೀರೊ. ನಿನ್ನಲ್ಲಿ ನೀನು ನಂಬಿಕೆಯಿಡು. ನಿನ್ನ ಜೀವನ ಸಂತಸವಾಗಿರುತ್ತದೆ' ಎಂಬ ಭಾವ ತರುವಂಥ ಪಾತ್ರ, ಕಥೆ ಹೇಳಲು ಇಷ್ಟಪಡುತ್ತೇನೆ. ನನ್ನ ಸಿನಿಮಾಗಳಲ್ಲಿ ಸಾಮಾನ್ಯ ಮನುಷ್ಯ, ಸಾಮಾನ್ಯ ಜೀವನವನ್ನೇ ಪ್ರತಿನಿಧಿಸಲು ಇಷ್ಟಪಡುತ್ತೇನೆ. ತಮ್ಮ ಕಥೆಗೆ ತಾವೇ ಹೀರೊ ಎನ್ನುವಂತೆ ಸಿನಿಮಾ ಪ್ರೇಕ್ಷಕರಿಗೆ ಕನೆಕ್ಟ್ ಆಗಬೇಕು. ತೆರೆ ಮೇಲೆ ಸಾಮಾನ್ಯ ಮನುಷ್ಯನನ್ನು ಹೀರೊ ಆಗಿ ನೋಡಿದಾಗ ಪ್ರೇಕ್ಷಕರೂ ಸಿನಿಮಾವನ್ನು ತಮ್ಮೊಳಗೆ ಇಳಿಸಿಕೊಳ್ಳುತ್ತಾರೆ" ಎಂದಿದ್ದಾರೆ.

ದುನಿಯಾ ವಿಜಯ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಸಿನಿಮಾದಲ್ಲಿ ದುನಿಯಾ ವಿಜಯ್ ಮಗಳು ಮೋನಿಷಾ ವಿಜಯ್ ಕುಮಾರ್ ಜೊತೆ ವಿನಯ್ ನಟಿಸುತ್ತಿದ್ದಾರೆ.

ಈ ಸಿನಿಮಾ ಅವಕಾಶದ ಬಗ್ಗೆಯೂ ಮಾತನಾಡಿರುವ ಅವರು, ಸಿನಿಮಾ ಪ್ರೊಮೋಷನ್ ಸಮಯದಲ್ಲಿ ಅನಿರೀಕ್ಷಿತವಾಗಿ ಇಬ್ಬರೂ ಭೇಟಿಯಾದೆವು. ಆಗ ಈ ಸ್ಕ್ರಿಪ್ಟ್ ವಿಚಾರವನ್ನು ಅವರು ನನ್ನ ಮುಂದಿಟ್ಟರು. ಜನಸಾಮಾನ್ಯರನ್ನು ವಿಶೇಷವಾಗಿ ಪ್ರೆಸೆಂಟ್ ಮಾಡುವುದು ದುನಿಯಾ ವಿಜಯ್ ಅವರ ವಿಶೇಷತೆ. ಈ ರೀತಿಯ ಕಂಟೆಂಟ್‌ಗಳು ಹೊಸ ಪ್ರೇಕ್ಷಕರನ್ನೂ ನೀಡುತ್ತವೆ. ಇನ್ನೆರಡು ತಿಂಗಳಲ್ಲಿ ಚಿತ್ರೀಕರಣ ಆರಂಭಗೊಳ್ಳಲಿದೆ' ಎಂದು ಮಾಹಿತಿ ನೀಡಿದ್ದಾರೆ.